ಅಂಚೇ ಇಲಾಖಾ.

ನಂ. 77—47. ತಾರೀಖು 13ನೇ ಮೇ 1884.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತ್ತವೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಆನೆಕಲ್	ದೊಮ್ಮಸಂದ್ರ.
ನಂಜನಗೂಡು	ಹುಲ್ಲಹಳ್ಳಿ.

ಬಿ. ಮರಿಗಂಗಯ್ಯ,
ಅಂಚೇ ಬಕಷಿ.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 4ನೇ ಜೂ೯ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವೆಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂಬು ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ್ಣ ಆಕ್ಟು 85ನೇ ಸೆಕ್ಷಣ ಅನುಸರಿಸಿ ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ.	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟ್ರಿ ನಾಶವೇ ಆಗುವ ದಿನ್ನಲ್ಲಿ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು
. .	17—8—81	29—12—81	24—6—82	ಹೊನ್ನವಳ್ಳಿ ಕಸಬಾ ಗ್ರಾಮದಲ್ಲಿ ಇರುವ ಚಿಕ್ಕ ಬೈರಪ್ಪನ ಮಗ ತಿಮ್ಮಣ್ಣಯ್ಯ	ತಿಪಟ್ಟೂರು ಗ್ರಾಮದಲ್ಲಿ ಯಿರುವ ಸೋಲೂರು ನಾರಣಪ್ಪನಮಗ ರಾಮಶೆಟ್ಟಿ	45 ರೂಪಾಯಿಗೆ ಹೊನ್ನವಳ್ಳಿ ಕಸಬೀಯಲ್ಲಿ ಯಿರುವ 5 ಅಂಕಣದ ಹೆಂಚಿನ ಮನೆ ಆಧಾರ ಪತ್ರ.

ಕೆ. ಮಹಮ್ಮದಲ್ಲಿ,
ಫಾರ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಏಪ್ರೆಲ್ 1884.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳೀಯಲ್ಲಿಲ್ಲದ ಕಂದಾಯ ಠರಾಯಿಸಲ್ಪಟ್ಟ ಮತ್ತು ಕಂದಾಯ ಠರಾಯಿಸಲ್ಪಡದ ತಮಾಂ ಜಮೀನುಗಳು, ಗ್ರಾಮ ಜೀಲೀಗಳು, ಅಮರಾಯಿ ವ ಅಮರಾಯಿ ಜೀಲೀಗಳು, ಇನ್ನುಗಳು ಅಡಗಿರುವ ಡಿಸ್ಟ್ರಿಕ್ಟು ಜಂಗ್ಲೀಗಳ ಪಸಾರೀ ಹುಟ್ಟುವಳೀಯನ್ನು, 1885ನೇ ಮಾರ್ಚೀ 31ರ ವರಿಗೆ ಜಮಾಇಸುವ ಹಕ್ಕು ದಾರೀಯು, ತಾಲ್ಲೂಕುವಾರಾಗಿ ಬಹಿರಂಗವಾದ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರಿಂದ, 1884ನೇ ಜೂ೯ 5ನೇ ಮೆಕ್ಕಂ ಮಧ್ಯಾನ್ಹ ವಿಕ್ರಯಿಸಲ್ಪಡುವದು.

346

ತಾಲ್ಲೂಕು.	ಹುಟ್ಟುವಳಿಯ ತವಸೀಲ್.
ಮೈಸೂರು ಹೆಗ್ಗಡದೇವನಕೋಟೆ ಹುಣಸೂರು ಗುಂಡ್ಲುಪೇಟೆ ನಂಜನಗೂಡು ಜಾಮರಾಜನಗರ ತಿರುಮಕೋಡ್ಲು ನರಸೀಪುರ ಮಂಡ್ಯ ಶ್ರೀರಂಗಪಟ್ಟಣ ಯಡತೋರೆ	1 ಅಳಲೇಕಾಯಿ, 2 ತಾರೇಕಾಯಿ, 3 ಸೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದ ಬಂಕೆ 6 ಕಾಡು ಅರಿಸಿನ. 7 ಜೇನುಮೇಣ, ವ ಜೇನುತುಪ್ಪ, 8 ಅರಗು, 9 ಕಪಿಲೇರಂಗು, 10 ಪಟ್ಟಿಚಕ್ಕೆ, 11 ಪತಂಗ, 12 ಮುಡ್ಡಿ, 13 ಚಕ್ಕಳದಬೀಜ, 14 ಚೆಗಚೆ ಬೀಜ, 15 ಹೊಂಗೇಬೀಜ, 16 ಗೇರುಬೀಜ, 17, ಹಾಲು ಮುಡ್ಡಿ, ಅವರಿಕೇ ಬಂಕೆ, 19 ಸಾರಗದ ಕೊಂಬು, 20 ಗುಗ್ಗಳ ವಗೈರೇ.

ಇಜಾರೇದಾರರಿಗೆ, ಹಿಡುವಳೀ ಜಮೀರ್ಗಳಲ್ಲೂ ಸ್ವಂತ ಅಮರಾಯಿಗಳಲ್ಲೂ ಯಿರುವ ಮರಗಳ ಹುಟ್ಟುವಳೀ ವಿಷಯದಲ್ಲಿ ಯಾವ ಹಕ್ಕು ದಾರಿಯೂ ಉಂಟಾಗತಕ್ಕದ್ದಲ್ಲವು.

ಜಡ ದರಖಾಸ್ತುದಾರನು, ದರಖಾಸ್ತು ಮೊಬಲಗ್ ಪೈಕೀ ನೇಕಡಾ 25ರ ಪ್ರಕಾರ ಕೂಡ್ಲೇ ಠೇವಣೀ ಯಿಟ್ಟು ಬಾಕೀ ಮೊಬಲಗನ್ನು ಡಿಸ್ಟ್ರಿಕ್ಟು ಯಾ ತಾಲ್ಲೂಕು ಖಜಾನೇಯಲ್ಲಿ ಸಮನಾದ ಮೂರು ಖಿಸ್ತುಗಳ ಪ್ರಕಾರ ಸ॥ 1884ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿಯೂ, 1884ನೇ ನವಂಬರ್ 1ನೇ ವರ್ಕುಂನಲ್ಲಿಯೂ, 1884ನೇ ಡಿಸೆಂಬರ್ 1ನೇ ತಾರೀಖಿನಲ್ಲಿಯೂ, ಪಾವತಿ ಮಾಡತಕ್ಕದ್ದು.

ಯಾವ ಖಿಸ್ತಾಗಲಿ ಬಾಕೀಯಾದಾಗ ಪಾವತೀ ಮಾಡಲಿಕ್ಕೆ ತಪ್ಪಿದರೆ, 1885ನೇ ಇಸವೀ ಮಾರ್ಚಿ 31ರ ವರಿಗೆ ಸಾಲಿನ ಉಳಿದ ಭಾಗಕ್ಕೆ ಜಂಗ್ಲೀ ಹುಟ್ಟುವಳೀಯನ್ನು ಜಮಾಇಸುವ ಹಕ್ಕು ಫಾರೆಸ್ಟು ಇಲಾಖೇಯವರಿಂದ ಪುನಃ ಹರಾಜು ಮಾಡಲ್ಪಡುವದು, ಅಥವಾ ಅಮಾನೀಯಲ್ಲಿ ಸದರೀ ಇಲಾಖೇಯವರಿಂದ ರೂಢಿಸಲ್ಪಡತಕ್ಕದ್ದು, ಹಣ ಕೊಡಲಿಕ್ಕೆ ತಪ್ಪುದವನು ಅದರ ದೆಸೆಯಿಂದ ಉಂಟಾಗುವ ಯಾವ ನುಕ್ಸಾನಿಗಾಗಲಿ ಜವಾಬ್ದಾರನಾಗಿ ಮಾಡಲ್ಪಡತಕ್ಕದ್ದು.

ಫಾರೆಸ್ಟು ಪ್ರೊಬೇಷನರವರು, ದರಖಾಸ್ತು ಮಾಡಲಿಕ್ಕೆ ಖಾಯಿಷ್ ಮಾಡತಕ್ಕವರಿಗೆ ಬೇಕಾದ ಯಾವ ಸಂಗತಿಯನ್ನಾಗಲಿ, ಹರಾಜು ತಾರೀಖಿಗೆ ಮುಂದೆ ಅವರ ಆಫೀಸಿನಲ್ಲಿ ಖುದ್ ಖಾಯಿಷ್ ಮಾಡಿಕೊಂಡರೆ ತಿಳಿಸತಕ್ಕದ್ದು.

ಅಬ್ದುಲ್‌ಖಾದರ್ ಕೆ. ಬಿ.,
ಡೆಪ್ಯುಟಿ ಕಮ್ಮಿಷನರ್.

ತಾರೀಖು 14ನೇ ಮೇ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಜೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಅಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
491 1881—82	ಕೇತಗಾಲದ ಗ್ರಾಮದ ಮುಲ್ಲಯ್ಯನ ಬಸವಯ್ಯನ ಮಗನ ಮರಿದೇವರು, ಶಿವಾಚಾರದ ಜಾತಿ, ಪಟೇಲ್	ಕೇತಗಾಲದ ಗ್ರಾಮದಲ್ಲಿ ಯಿರುವ ಕುರುಬರಜಾತಿ ಮೆಂಜ್ಯನಯ ಮಗ ಸುಬ್ಬ	14—12—81	14—12—81	90 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ., ರಿಜಿಸ್ಟ್ರಾರ್.